ದಿ:**18.11.2016** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ವಕೀಲರಿಂದಃ-

6ನೇ ಪ್ರತಿವಾದಿ ಪರ ಸಾಕ್ಷಿ ಹೇಳಲು ನನಗೆ ಯೂವುದೇ ಅಧಿಕಾರ ಪತ್ರ ಕೊಟ್ಟಿಲ್ಲ. ದಾವಾದಲ್ಲಿ ಎ ಮತ್ತು ಬಿ ಷೆಡ್ಯೂಲ್ ವಿಚಾರ ನನಗೆ ಗೊತ್ತಿಲ್ಲ. ಸೈಟ್ ನಂ.8 ಮತ್ತು 9 ಯಾವ ಸರ್ವೆ ನಂ.ನಲ್ಲಿ ಬರುತ್ತದೆ ಎಂದು ಹೇಳಲಾಗುವುದಿಲ್ಲ.

ನಾವು ಈ ಹಿಂದೆ ಮಾಡಿದ ಅಸಲು ದಾವೆ ನಂ.635/02 ಆ ಕೇಸಿನಲ್ಲಿ ಈ ಕೇಸಿನ ವಾದಿ ಪಾರ್ಟಿ ಇರಲಿಲ್ಲ ಅನ್ನುವುದು ನಿಜ. ಕೃಷ್ಣ ಎಂಬುವವರು ಸಹಾ ಅಲ್ಲಿ ಪಾರ್ಟಿ ಇರಲಿಲ್ಲ. ಸರ್ವೆ ನಂ.176 ರ ಜಮೀನು ನಿವೇಶನದ ಪಶ್ಚಿಮದ ಕಡೆಗೆ ಬರುತ್ತದೆ. ನಾನು ಲೇ ಔಟ್ ಪ್ಲಾನ್ ನೋಡಿಲ್ಲ. ಅದೇ ರೀತಿ ಯರಗನಹಳ್ಳಿ ಮತ್ತು ಕ್ಯಾತಮಾರನಹಳ್ಳಿ ಗ್ರಾಮದ ವಿಲೇಜ್ ಮ್ಯಾಪನ್ನು ನಾನು ನೋಡಿಲ್ಲ. ಸರ್ವೆ ನಂ.176 ಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ನಿಜ.

ನಿಡಿ-28 ಕ್ಕೂ ನಿಪಿ-6 ಕ್ಕೂ ಟ್ಯಾಲಿ ಆಗುತ್ತಿಲ್ಲ ಅನ್ನುವ ವಿಚಾರ ನನಗೆ ಗೊತ್ತಿಲ್ಲ. ಮತ್ತೊಂದು ದಾವೆ 117/91 ರಲ್ಲೂ ಸಹಾ ವಾದಿ ಸಣ್ಣಮ್ಮ ಪಾರ್ಟಿ ಅಲ್ಲ ಎಂದರೆ ಸರಿ. ಸದರಿ ದಾವೆ ಸೋಮಶೇಖರವರ ಮೇಲೆ ಸೊಸೈಟಿಯವರು ಹಾಕಿದ್ದರು. ಸದರಿ ಸೋಮಶೇಖರ ನನಗೆ ಪರಿಚಯವಿಲ್ಲ. ಅದೇ ರೀತಿ ವಾದಿ ಸಣ್ಣಮ್ಮ ಸಹಾ ನನಗೆ ಪರಿಚಯವಿಲ್ಲ. ಅದೇ ರೀತಿ ಸಣ್ಣಮ್ಮ ಮತ್ತು ತಾಯಿ ಮತ್ತು ಮಕ್ಕಳ ಸಂಬಂಧ ಹೇಗೆ ಇತ್ತು ಅನ್ನುವ ವಿಚಾರ ಸಹಾ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಸೋಮಶೇಖರ ಮತ್ತು ಕೃಷ್ಣ ಇವರು ಸಣ್ಣಮ್ಮನ್ನನ್ನು ಎತ್ತಿ ಕಟ್ಟಿ ಕೇಸು ಹಾಕಿದ್ದಾರೆ ಅಂತ ಹೇಳಿ ಬರೆಸಿರುವುದಿಲ್ಲ.

ನಮ್ಮ ಲೇಔಟ್ ರಾಜಕುಮಾರ್ ರಸ್ತೆಯ ಪೂರ್ವದ ಕಡೆಗೆ ಮಾತ್ರ ಇರುತ್ತದೆ ಅಂತ ಹೇಳುವುದು ಸರಿಯಲ್ಲ. ಗಡಿ ಗುರುತಿಸಲು ನಾವು ಸೊಸೈಟಿಯವರನ್ನು ಕೇಳಬೇಕಾಗುತ್ತದೆ. ನಾವು ಈ ಹಿಂದೆ ಮಾಡಿಸಿರುವ ಅಳತೆ ಯಾವುದೂ ಸರಿ ಇಲ್ಲ ಅನ್ನುವುದು ಸರಿಯಲ್ಲ.

ಗೇಟ್ ಮತ್ತು ಕಾಪೌಂಡ್‌ನ್ನು ಹಾಕಿ ಸುಮಾರು 15 ವರ್ಷ ಆಗಿರುತ್ತದೆ , ಆ ಬಗ್ಗೆ ದಾಖಲೆ ಅಂದರೆ

ಅವುಗಳನ್ನು ಹಾಕಿರವುದೇ ದಾಖಲೆ ಇರುತ್ತದೆ. ಈ ದಾವೆಯನ್ನು ಸಮನ್ಸ ಬಂದ ನಂತರದಲ್ಲಿ ನಾವು ಆ ರೀತಿ ಕಾಪೌಂಡ್ ಹಾಕಿರುತ್ತೇವೆ ಅನ್ನುವುದು ಸರಿಯಲ್ಲ. ನಾವು ಗೇಟ್ ಹಾಕಿಲ್ಲ , ಆದರೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಸಾಕ್ಷಿ ಸ್ವತಃ ಮುಂದುವರಿದು ಅಲ್ಲಿ ಗೇಟ್ ಇಲ್ಲ ತೆಗೆದಿದ್ದಾರೆ ಅಂತ ಹೇಳುತ್ತಾರೆ.

ಸಣ್ಣಮ್ಮ ಮತ್ತು ಸೋಮಶೇಖರ ತಾಯಿ ಮಕ್ಕಳ ಸಂಬಂಧ ಅಷ್ಟಕಷ್ಟೇ ಮತ್ತು ಲಾಗಾಯ್ತಿನಿಂದ ಬೇರೆ ಬೇರೆ ವಾಸವಾಗಿದ್ದರು ಅನ್ನುವ ವಿಚಾರ ನನಗೆ ಗೊತ್ತಿಲ್ಲ. ಅಸಲು ದಾವೆ ನಂ. 117/91 ರಲ್ಲಿ ನಾನು ಪಾರ್ಟಿ ಇರಲಿಲ್ಲ. ಆ ಕೇಸಿನಲ್ಲಿ ಅಳತೆ ಪ್ರಕ್ರಿಯೆ ನಡೆದಾಗ ಸ್ಥಳದಲ್ಲಿ ನಾನು ಹಾಜರಿರಲಿಲ್ಲ. ಅದೇ ರೀತಿ ಅಳತೆ ಆಯಿತೋ ಇಲ್ಲವೋ ಅನ್ನುವ ವಿಚಾರ ಸಹಾ ನನಗೆ ಗೊತ್ತಿಲ್ಲ. ಆ ಕಮೀಷನರ್ ವರದಿಯನ್ನು ಸ್ಥಳ ತನಿಖೆ ಮಾಡದೇ ಬರೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಆ ವಿಚಾರ ಗೊತ್ತಿಲ್ಲ ಅಂತ ಹೇಳುತ್ತಾರೆ.

ಸೋಮಶೇಖರವರು ಹಾಕಿದ ಕೇಸಿನಲ್ಲಿ ನನ್ನ ಅಡ್ಡ ವಿಚಾರಣೆ ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಕೋರ್ಟಿಗೆ ಬಂದೇ ಇಲ್ಲ ಅಂತ ಹೇಳುತ್ತಾರೆ. ಶಿವನಂಜಪ್ಪ ಎನ್ನುವವರು ಸೋಮಶೇಖರವರ ಮೇಲೆ ಹಾಕಿದ ಕೇಸು ಜೊತೆಯಲ್ಲಿಯೇ ನಡೆಯಿತು. ಆ ಕೇಸಿನಲ್ಲೂ ಸಹಾ ಶಿವನಂಜಪ್ಪ ಇವರನ್ನು ಸೋಮಶೇಖರರವರ ಕಡೆಯವರು ಪಾಟೀ ಸವಾಲು ಮಾಡಿರುವುದಿಲ್ಲ.

ಈ ದಾವೆ ಮಾಡುವ ಕಾಲಕ್ಕೆ ನಾವು ಸ್ವತ್ತಿನ ಸ್ವಾಧೀನದಲ್ಲಿ ಇದ್ದೆವು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಮೇಲೆ ಹೇಳಿದ ಎರಡೂ ಕೇಸುಗಳಲ್ಲಿ ಸೋಮಶೇಖರವರಿಗೆ ಸೂಟ್ ಸಮನ್ಸ ಹೋಗಿರಲಿಲ್ಲ ಅನ್ನುವುದು ಸರಿಯಲ್ಲ. ಸರ್ವೆ ನಂ.176 ರ ಯಾರ ಮಾಲೀಕತ್ವದ ಆಸ್ತಿ ಅನ್ನುವುದು ನನಗೆ ಗೊತ್ತಿಲ್ಲ. ವಾದಿಯ ಜಮೀನನ್ನು ಒತ್ತುವರಿ ಮಾಡುವ ಸಲುವಾಗಿ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

Sd/-

ಲಘು ವ್ಯವಹಾರಗಳ ಮತ್ತು ಸಿವಿಲ್
ನ್ಯಾಯಾಧೀಶರು (ಹಿ.ವಿ), ಮೈಸೂರು.